ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಧ್ಯಕ್ಷರೇ ನನ್ನ ವಿಷಯ ಏನಾಯಿತು? ಬೀದರ್‌ನಲ್ಲಿ ಹಾಲು ಉತ್ಪಾದನೆ ....

ಅಧ್ಯಕ್ಷರು : ಬೀದರ್, ಗುಲ್ಬರ್ಗಾದಲ್ಲಿನ ಹಾಲು ಉತ್ಪಾದನೆ ವಿಷಯ ಏನಾಯಿತು?

ಶ್ರೀ ಬಿ. ಬಸವಲಿಂಗಪ್ಪ : ಈ ವಿಚಾರ ಸುಮಾರು ಒಂದು ವರ್ಷದಿಂದ ನೆನೆಗುದಿಗೆ ಬಿದ್ದಿದೆ. ಗುಲ್ಬರ್ಗಾದಲ್ಲಿ ಹಾಲು ಕಡಿಮೆ ಉತ್ಪಾದನೆಯಾಗುತ್ತಿದೆ. ಇವೆರಡೂ ಪ್ರದೇಶಗಳು ದೊಡ್ಡದಿವೆ. ಬೀದರ್‌ನಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ. ಅಲ್ಲಿ ಹೆಣ್ಣು ಮಕ್ಕಳೇ ಸಹಕಾರ ಸಂಘ ಮಾಡಿಕೊಂಡು ಹೆಣ್ಣು ಮಕ್ಕಳೇ ಅಲ್ಲಿ ಈ ಬಗ್ಗೆ ಮುಂದೆ ಬಂದು ಮಾಡುತ್ತಿದ್ದಾರೆ. ಅಲ್ಲಿಯೂ ಕೂಡ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಬೇಕು. ಹಾಗೂ ಇಲ್ಲಿಯ ವ್ಯವಸ್ಥೆಯನ್ನು ಅಲ್ಲೂ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆದರೆ ಇಲ್ಲಿ, ಗುಲ್ಬರ್ಗಾದಲ್ಲಿ ಉತ್ಪತ್ತಿ ಕಡಿಮೆಯಾಗಿದೆ. ಇಲ್ಲಿರುವ ಪ್ಲಾಂಟೂ ನಡೆಯಬೇಕು ಹಾಗೂ ಅಲ್ಲಿರುವ ಪ್ಲಾಂಟೂ ನಡೆಯಬೇಕು. ನೀವು ಪ್ರಾರಂಭ ಮಾಡಿ. ನಿಮಗೆ ನಮ್ಮ ಸಹಕಾರ ಇರುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವು ಅರ್ಜಿ ಕೊಟ್ಟಿದ್ದೇವೆ. ನಾವು ಏನು ಮಾಡುವುದು? ನೀವು ಮಾಡಬೇಕು. ನಾನು ಹೇಳಿದ್ದೇನೆ. ನೀವೂ ಕೂಡ ಪ್ರಯತ್ನ ಮಾಡುವುದು ಒಳ್ಳೆಯದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಮ್ಮ ಕಡೆ ಏನು ಇದೆ ನೀವು ಮಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ : ನಾನು ಮಾಡುತ್ತಿದ್ದೇನೆ.

ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವ.

ಶ್ರೀ ಸಿ. ಬೈರೇಗೌಡ : ಕುಡಿಯುವ ನೀರಿನ ಬಗ್ಗೆ ಸದನದಲ್ಲಿ ಬಹಳ ಚರ್ಚೆಯಾಗಿದೆ. ಆದರೆ ಅದರ ಪ್ರತಿಫಲ ಸಿಗುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಶನಿವಾರದ ದಿವಸ ನಮ್ಮ ಕೋಲಾರ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ಸಭೆ ನಡೆದು ಪ್ರಾಮುಖ್ಯವಾಗಿ ಎರಡು ಗಂಟೆಯವರೆಗೆ ಚರ್ಚೆಯಾಯಿತು. ವಿರೋಧ ಪಕ್ಷದ ಸದಸ್ಯರೂ ಕೂಡ ಆವತ್ತಿನ ದಿವಸ ಸಭೆಯಲ್ಲಿ ಭಾಗವಹಿಸಿದ್ದೆವು. ಕೊಳವೆ ಬಾವಿಗಳನ್ನು ಹಾಕಿಸುವ ಕಾರ್ಯಕ್ರಮವನ್ನು ಮಾತ್ರ ಮುಂದಿಟ್ಟು ಬಾಕಿ ಎಲ್ಲಾ ವಿಚಾರವನ್ನು ಬದಿಗಿಟ್ಟು ಚರ್ಚೆ ಮಾಡಿದೆವು. ಅದನ್ನು ಚರ್ಚೆ ಮಾಡಿದ ಸಂದರ್ಭದಲ್ಲಿ ಆದಂಥಾದ್ದು ಏನು ಎಂದರೆ ಕೆಲವು ಕಡೆ ವರ್ಷದ ಪ್ರಾರಂಭದಲ್ಲಿ ಮತೀಯ ಗಲಭೆಗಳು ಪ್ರಾರಂಭವಾಯಿತು. ಆ ಕಾರಣದಿಂದ ತಕ್ಷಣ ಕೊಳವೆ ಬಾವಿಗಳನ್ನು ಹಾಕತಕ್ಕಂಥಾದ್ದು ಆಗಲಿಲ್ಲ. ನಂತರ ಡೀಸೆಲ್ ಕೊರತೆ ಪ್ರಾರಂಭವಾಯಿತು. ಆಗ ಕೆಲಸ ಬಂದಾಯಿತು. ಅದಾದ ಮೇಲೆ ಕೆಲವು ಕಡೆ ಸಿಮೆಂಟ್ ಸಿಗಲಿಲ್ಲ. ಕೆಲಸ ಕುಂಠಿತವಾಯಿತು. ಈಗ ಇದೆಲ್ಲ ಆದ ಮೇಲೆ ಡೀಸೆಲ್ ಬೆಲೆ ಜಾಸ್ತಿಯಾಯಿತು. ಎಂಬ ಕಾರಣಕ್ಕೋಸ್ಕರ ರಿಗ್ ಇರತಕ್ಕಂತಹವರು ಕೊಳವೆ ಬಾವಿಗಳನ್ನು ಹಾಕುವುದಕ್ಕೆ ಮುಂದೆ ಬರುತ್ತಿಲ್ಲ. ಕಾರಣವೇನೆಂದರೆ ಒಂದು ಮೀಟರ್‌ಗೆ 170-180 ಷೆಡ್ಯೂಲ್ ರೇಟ್ ಇದೆ. ಈ ಎಲ್ಲಾ ಕಾರಣಗಳಿಂದ ಹೆಚ್ಚುವರಿಯಾಗಿರತಕ್ಕಂತಹ ಬೆಲೆ 220 ರೂಪಾಯಿಯವರೆಗೆ ಕೇಳುತ್ತಿದ್ದಾರೆ. ಜಿಲ್ಲಾ ಪರಿಷತ್ತಿನಲ್ಲಿ ಇದರ ಬಗ್ಗೆ ತೀರ್ಮಾನ ಮಾಡಿ ಹೆಚ್ಚಿಗೆ ಬೆಲೆ ಕೊಟ್ಟಾದರೂ ಕೂಡ ಬಾವಿ ಹಾಕಿಸಿ ಎಂದು ಹೇಳಿದೆವು. ಅಲ್ಲಿನ ಮುಖ್ಯ ಕಾರ್ಯದರ್ಶಿಯವರು ಅದಕ್ಕೆ ಒಪ್ಪುತ್ತಿಲ್ಲ. ಸರಕಾರದಿಂದ ಆಜ್ಞೆ ಬರುವವರೆಗೆ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಕೊಳವೆ ಬಾವಿ ಹಾಕಿಸುವುದಕ್ಕಲ್ಲ ಕೇಸಿಂಗ್ ಪೈಪು ಸಹ ಸಿಗುತ್ತಿಲ್ಲ. ಈ ಎರಡು ಕಾರಣದಿಂದ ಕೆಲಸ ತಡವಾಗುತ್ತಿದೆ.

ಸ್ವಲ್ಪಮಟ್ಟಿಗೆ ಹಣ ಹೆಚ್ಚಾದರೂ ಕೂಡ ಇದನ್ನು ಕೈಗೆತ್ತಿಕೊಳ್ಳಬೇಕು. ಕೆಲಸ ಮಾಡತಕ್ಕಂತಹವರು ಅಲ್ಲಿ ಇದ್ದರೂ ಕೂಡ ಸ್ವಲ್ಪಮಟ್ಟಿಗೆ ಹಣವಿದ್ದರೂ ಕೂಡ ರಿವೈಸ್ಡ್ ರೇಟ್‌ನ್ನು ಮಾಡಿಕೊಡದೇ ಇರುವ ಕಾರಣದಿಂದ ಜನರಿಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ. ಇದು ರಾಜ್ಯಾದಾದ್ಯಂತ ಇರತಕ್ಕಂತಹ ಸಮಸ್ಯೆಯಾದರೂ ಕೂಡ ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಹೆಚ್ಚು ಇದೆ. ನಿನ್ನೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷ ಭೇಟಿಯಾಗಿ ಮೆಮೊರ್ಯಾಂಡಮ್‌ನ್ನು ಕೊಟ್ಟಿದ್ದಾರೆಂದು ತಿಳಿಯಿತು. ಅದರಲ್ಲಿ ಇದೆಲ್ಲವನ್ನು ಹೇಳಿದ್ದಾರೆ. ಇವತ್ತೇ ದೂರವಾಣಿ ಮೂಲಕ ಟೆಲೆಕ್ಸ್ ಮೂಲಕ ಯಾವುದಾದರೂ ಒಂದು ರೂಪದಲ್ಲಿ ಕೋಲಾರ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ರಿವೈಸ್ಡ್ ರೇಟ್ ಏನು ಇದೆ ಅದರ ಪ್ರಕಾರ ಕೊಟ್ಟು ತಕ್ಷಣ ಕೆಲಸವನ್ನು ಪ್ರಾರಂಭ ಮಾಡುವಂತೆ ನಿರ್ದೇಶನ ಕೊಡಬೇಕು. ಜಿಲ್ಲಾಧಿಕಾರಿಗಳಿಗೆ ಮಾನ್ಯ ಖರ್ಗೆಯವರು ಹಣ ಕೊಟ್ಟಿದ್ದಾರೆ, ಅದು ನಡೆಯುತ್ತಿದೆ. ಒಂದೇ ತಾಲ್ಲೂಕಿನಲ್ಲಿ ಜಿಲ್ಲಾಧಿಕಾರಿ ಕೊಳವೆ ಬಾವಿಗಳಿಗೆ ಹೆಚ್ಚಿನ ಬೆಲೆ ಕೊಡುತ್ತಿದ್ದಾರೆ ಕೊಡುತ್ತಿರುವುದಕ್ಕೆ ಕಡಿಮೆ ರೇಟ್ ಎಂದರೆ ಯಾರೂ ಬರುವುದಿಲ್ಲ, ಅಲ್ಲಿ ತೀವ್ರವಾದ ಪರಿಸ್ಥಿತಿ ಇದೆ ಇದನ್ನು ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ತಾವು ನಿರ್ದೇಶನ ಕೊಟ್ಟು ಹೆಚ್ಚಿನ ಬೆಲೆಯನ್ನು ನೀಡಿ ಕೊಳವೆ ಬಾವಿಗಳನ್ನು ಹಾಕಿಸುವುದಕ್ಕೆ ಏರ್ಪಾಡು ಮಾಡಬೇಕು.

ಶ್ರೀ ಎಂ. ವೆಂಕಟೇಶ್ : ನಾನು ಕೇಳಿದ್ದಕ್ಕೆ ಉತ್ತರವೇ ಬರಲಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ : ಕೋಲಾರ ಜಿಲ್ಲೆಯಲ್ಲಿ 1 ವರ್ಷದಿಂದ ಕುಡಿಯುವ ನೀರಿನ ವ್ಯವಸ್ಥೆ ಬಹಳ ಹದಗೆಟ್ಟಿದೆ. ಅನೇಕ ಬಾರಿ ಮಂತ್ರಿಗಳಲ್ಲಿ, ಮುಖ್ಯಮಂತ್ರಿಗಳಲ್ಲಿ ಸಂಬಂದಪಟ್ಟ ಇಲಾಖಾ ಮುಖ್ಯಸ್ಥರನ್ನು ಭೇಟಿ ಮಾಡಿದಾಗ ಇದರ ಬಗ್ಗೆ ಹೇಳಿದ್ದೇನೆ. 1250 ಕೊಳವೆ ಬಾವಿಗಳು ಬತ್ತಿ ಹೋಗಿದೆ. ಜೊತೆಗೆ ಬೇಸಿಗೆ ಕಾಲ ಬೇರೆ ಬಂದಿದೆ. ಇನ್ನು ಮುಂದೆಯೂ ಕೂಡ ಇನ್ನೂ 500 ಬೋರ್‌ವೆಲ್‌ಗಳು ಕೆಡತಕ್ಕಂತಹ ಪರಿಸ್ಥಿತಿಯಲ್ಲಿವೆ. ನಮ್ಮ ಜಿಲ್ಲೆ ಬರಗಾಲ ಪೀಡಿತ ಪ್ರದೇಶವೆಂದೂ ಕೂಡ ಆಗಿದೆ. ಅಲ್ಲದೆ ಇದು ಗಡಿನಾಡು ಪ್ರದೇಶ ಆಗಿರುವುದರಿಂದ ಈ ನೀರಿನ ಬವಣೆಯನ್ನು ನೀಗಿಸಬೇಕೆಂದು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಅಧ್ಯಕ್ಷರೇ ನಮ್ಮ ದುರದೃಷ್ಟ ಸರ್ಕಾರವನ್ನು ನಾವು ಟೀಕೆ ಮಾಡುತ್ತೇವೆಂದು ಅಲ್ಲ, ಹಳ್ಳಿಗಾಡಿನ ಜನಗಳಿಗೆ ಬಹಳ ಅವಶ್ಯಕವಾಗಿ ಬೇಕಾಗಿರತಕ್ಕ ಕುಡಿಯುವ ನೀರಿನ ಸಮಸ್ಯೆಯನ್ನು ಗಮನಿಸಿದಾಗ ಹೆಣ್ಣು ಮಕ್ಕಳು ಪಡತಕ್ಕ ತೊಂದರೆಯನ್ನು ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ನಾವು ಅದರ ಬಗ್ಗೆ ಹೇಳುತ್ತಿದ್ದರೂ ಸಹಿತ ಈ ಸಮಸ್ಯೆಯನ್ನು ಸಮರೋಪಾದಿಯಲ್ಲಿ ಮಾಡುತ್ತಿದ್ದೇವೆಂದು ಹೇಳುತ್ತಾರೆಯೇ ವಿನಹ ಇದುವರೆಗೆ ಯಾವ ಕಾರ್ಯಕ್ರಮವನ್ನು ಮಾಡಿಲ್ಲ. ಸರ್ಕಾರದವರು ಜನರಿಗೆ ಆಶ್ವಾಸನೆಯನ್ನು ಕೊಟ್ಟ ಮೇಲೆ ಕೆಲಸವನ್ನು ಮಾಡಬೇಕು. ಯಾವ ಹಳ್ಳಿಗಳಿಗೆ ಹೋದರೂ ಸಹಿತ ಜನ ಏನೂ ಕೇಳುವುದಿಲ್ಲ. ನಿಮ್ಮ ಸರ್ಕಾರ ಏನೂ ಮಾಡದಿದ್ದರೂ ಪರವಾಗಿಲ್ಲ ಕುಡಿಯುವ ನೀರನ್ನು ಕೊಡಿಯೆಂದು ಪರಿತಾಪದಿಂದ ಕೇಳುತ್ತಿದ್ದಾರೆ. ಕೂಡಲೇ ಸರ್ಕಾರ ಈ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟು ಕೆಲಸ ಮಾಡಬೇಕು. ಮಾನ್ಯ ಸದಸ್ಯರು ಹೇಳಿದ ಮಾತು ಸತ್ಯ. ಒಂದು ತಾಲ್ಲೂಕಿಗೆ ಬಹುಶಃ ನೂರು ಕೊಳವೆ ಬಾವಿಗಳು ಬೇಕು. ಹಳೆಯ ಕೊಳವೆಬಾವಿಗಳು ಬತ್ತಿಹೋಗಿವೆ. ಕೆಟ್ಟು ಹೋಗಿವೆ. ಅವುಗಳಲ್ಲಿ ನೀರು ಬರುತ್ತಿಲ್ಲ. ಸರ್ಕಾರದವರು ಏನೂ ಕೊಡದಿದ್ದರೂ ಜನಗಳಿಗೆ ಕುಡಿಯುವ ನೀರನ್ನು ಕೊಡುವುದರ ಮೂಲಕ ಜನರ ನೀರಿನ ಬವಣೆಯನ್ನು ತಪ್ಪಿಸಬೇಕೆಂದು ತಮ್ಮ ಮುಖಾಂತರ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಜಿಲ್ಲೆಯಲ್ಲಿಯೂ ಕುಡಿಯುವ ನೀರಿನ ಅಭಾವವಿದೆ. ಮಾನ್ಯ ಸದಸ್ಯರುಗಳು ಕೋಲಾರ ಮತ್ತು ತುಮಕೂರು ಜಿಲ್ಲೆಗಳ ಬಗ್ಗೆ ತಿಳಿಸಿದ ಹಾಗೆ ನೀರಿನ ಒಂದು ಬವಣೆ ಬಹಳ ಗಂಭೀರವಾದುದು. ತಾಲ್ಲೂಕಿಗೆ ಒಂದು ಶಾಸಕರ ಮತದಾರ ಕ್ಷೇತ್ರಕ್ಕೆ ಒಂದು ಮಂಡಲಕ್ಕೆ ಕೊಳವೆ ಬಾವಿಗಳನ್ನು ಕೊಡುತ್ತಿದ್ದೇವೆ. ಅವುಗಳಿಗೆ ಹಣವನ್ನು ಕೊಡುವುದರಲ್ಲಿ 8-10 ಕೊಳವೆ ಬಾವಿಗಳು ಕೆಡುತ್ತವೆ. ನೂರಾರು ಬಾವಿಗಳಲ್ಲಿ ಸಮಸ್ಯೆಗಳು ಬರುತ್ತವೆ. ಮಾನ್ಯ ಬೈರೇಗೌಡರು ಹೇಳಿದ ಹಾಗೆ ನಮ್ಮ ಜಿಲ್ಲಾ ಪರಿಷತ್ತಿನಲ್ಲಿ ಅಭಾವ ಪರಿಸ್ಥಿತಿಯ ಬಗ್ಗೆ ಚರ್ಚೆಯಾಯಿತು. ರಿಗ್‌ಗಳು ಒಂದು ಮೀಟರ್ ಕೊರೆಯಲಿಕ್ಕೆ 180ರಿಂದ 220 ರೂಪಾಯಿಗಳವರೆಗೆ ಬಾಡಿಗೆ ಕೇಳುತ್ತಾರೆ. ಕೇಸಿಂಗ್ ಪೈಪ್ ಡೀಸೆಲ್ ವಗೈರೆ ಬೆಲೆ ಹೆಚ್ಚಾಗಿರುವುದರಿಂದ ಜಿಲ್ಲೆಗಳಿಗೆ 8-10 ಕೊಳವೆ ಬಾವಿ ಕೊಟ್ಟರೆ ಅಷ್ಟಕ್ಕೆ ಹಣ ಬಿಡುಗಡೆ ಮಾಡಿದರೆ ಈ ಕಾರ್ಯಕ್ರಮಕ್ಕೆ ಬಹಳ ತೊಂದರೆಯಾಗಿದೆ. ಆದ್ದರಿಂದ ನಾನು ತಮ್ಮ ಮೂಲಕ ಸಂಬಂಧಪಟ್ಟ ಮಂತ್ರಿಗಳಿಗೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಕೊಳವೆ ಬಾವಿಗಳಿಗೆ ಹಣವನ್ನು ಬಿಡುಗಡೆ ಮಾಡುವಾಗ ಬಹಳ ಮಹತ್ವ ಕೊಟ್ಟು ಹೆಚ್ಚಿಗೆ ಹಣವನ್ನು ಕೊಟ್ಟು ಸಹಾಯ ಮಾಡಬೇಕು. ಬೇಸಿಗೆ ಬರುತ್ತಿದೆ, ಈ ತಿಂಗಳು ಮತ್ತು ಮುಂದಿನ ತಿಂಗಳು ನೀರಿನ ಅಭಾವ ಹೆಚ್ಚಾಗುತ್ತದೆ. ಕೆರು ನೀರಾವರಿ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದವರು ಹಣವನ್ನು ಕೊಟ್ಟಿದ್ದಾರೆ. ಅವುಗಳು ಬತ್ತಿ ಹೋಗಿವೆ. ಅವುಗಳಿಗೆ ಅಳವಡಿಸಿರತಕ್ಕ ಮೋಟಾರುಗಳು ಸುಟ್ಟು ಹೋಗಿವೆ. ಪೈಪುಗಳು ಹಾಳಾಗಿವೆ. ಒಂದೊಂದು ಊರಿನಲ್ಲಿ ನೀರನ್ನು ಮೇಲೆತ್ತಬೇಕಾದರೆ 400-500 ಅಡಿಗಳವರೆಗೆ ಹೋದರೂ ನೀರು ಸಿಗುವುದಿಲ್ಲ. ಅಂತಹ ಕಡೆಗಳಲ್ಲಿ ಸಾಮಾನ್ಯ ರಿಗ್‌ಗಳಿಂದ ನೀರನ್ನು ನೇಲಕ್ಕೆ ಎತ್ತಲು ಸಾಧ್ಯವಿಲ್ಲ. ಸೈಕ್ಲೋನ್ ರಿಗ್‌ಗಳು ಬೇಕಾಗುತ್ತವೆ. ಬೆಂಗಳೂರಿನಲ್ಲಿ 200-300' ಅಡಿ ಕೊಳವೆ ಬಾವಿಗಳನ್ನು ಮಾಡುತ್ತಾರೆ. ಹಳ್ಳಿಗಳ ಕಡೆಗೆ ಯಾರು ಬರುವುದಿಲ್ಲ. ಸರ್ಕಾರದವರು ಹಣವನ್ನು ಸ್ಟೇ ಇಸ್ ದಿ ಲಿಮಿಟಿ ಆ ತರಹ ಹಣವನ್ನು ಬಿಡುಗಡೆ ಮಾಡದಿದ್ದರೆ ತೊಂದರೆಯಾಗುತ್ತದೆ. ಸಂಬಂಧಪಟ್ಟ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಮತ್ತು ಕಂದಾಯ ಸಚಿವರು ಇದರ ಬಗ್ಗೆ ಬಹಳ ಕಳಕಳಿಯಿಂದ ಹಣವನ್ನು ಬಿಡುಗಡೆ ಮಾಡಿ ಇರತಕ್ಕ ಸಮಸ್ಯೆಗಳನ್ನು ಪರಿಹಾರ ಮಾಡಬೇಕು. ಸಂಬಂಧಪಟ್ಟವರನ್ನು ತತ್‌ಕ್ಷಣ ಕರೆಯಿಸಿ ದೂರವಾಣಿ ಮುಖಾಂತರ ಸಂದೇಶವನ್ನು ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ : ಮಾನ್ಯ ಅಧ್ಯಕ್ಷರೇ, ನೀರಿನ ಸಮಸ್ಯೆಯ ಬಗ್ಗೆ ನಮ್ಮ ಸಹೋದರರುಗಳು ತುಂಬಾ ಹೇಳಿದರು. ನಮ್ಮ ಕಷ್ಟದ ಬಗ್ಗೆ ಹೇಳಿರುವುದರಿಂದ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ನಮ್ಮ ನೀರಿನ ಉಳಿತಾಯದ ಬಗ್ಗೆ ಒಂದು ನಿಮಿಷ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಬೇಸಿಗೆಯ ಕಾಲದಲ್ಲಿ ತಮಗೆ ತಿಳಿದ ಹಾಗೆ ಬಹಳ ತೊಂದರೆಯಾಗುತ್ತದೆ. ನಮ್ಮಲ್ಲಿ ಇದ್ದಷ್ಟು ನೆಲ ಇದ್ದಷ್ಟೆ ಜಲ. ಇರುವ ಜಲವನ್ನು ಎಷ್ಟರ ಮಟ್ಟಿಗೆ ಉಳಿತಾಯ ಮಾಡಿ ಯಾವ ರೀತಿ ವಿನಿಯೋಗ ಮಾಡುತ್ತೇವೆ ಎನ್ನುವುದರ ಮೇಲೆ ನಮ್ಮ ಯಶಸ್ಸು ಕೂಡ ಅವಲಂಬಿಸಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಸಹಪಾಠಿಗಳು ಇದನ್ನು ತಪ್ಪಿಸುತ್ತಾರೆಂದು ನಾನು ಅಂದುಕೊಂಡಿದ್ದೇನೆ. ನಮ್ಮ ನೀರಾವರಿ ಯೋಜನೆಗಳಲ್ಲಿ ಕೆನಾಲ್‌ಗಳು ಇದೆಯಲ್ಲ, ಅದು ತುಂಬಾ ಹದಗೆಟ್ಟಿದೆ. ಆ ಕೆನಾಲ್‌ಗಳಲ್ಲಿ ನೀರು ಮುಂದಕ್ಕೆ ಹೋಗುವುದಿಲ್ಲ. ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳು ಬೇಕಾಗಿಲ್ಲ. ಒಂದೆರಡು ಲಕ್ಷ ರೂಪಾಯಿಗಳಲ್ಲಿ ಅದನ್ನು ರಿಪೇರಿ ಮಾಡಿಸಿದರೆ ಅನುಕೂಲವಾಗುತ್ತದೆ. ತೂಬುಗಳು ಅಡಿಗಡಿಗಳು, ಬಚ್ಚಲುಗಳು ಆಮೇಲೆ ಶಿಲ್ಟ್ ತೆಗೆಯುವುದು. ಶಿಲ್ಟ್ ತೆಗೆಯದಿರುವುದರಿಂದ ನೀರು ಮುಂದಕ್ಕೆ ಹೋಗುವುದಿಲ್ಲ. ಹೆಚ್ಚಿನ ವೇಗದಲ್ಲಿ ನೀರು

ಮುಂದಕ್ಕೆ ಹೋಗುವಂತೆ ಮಾಡಬೇಕು. ನೀರು ಮುಂದಕ್ಕೆ ಹೋಗುವ ವೇಗದ ಪ್ರಮಾಣ ಕಡಿಮೆಯಾಗುವುದರಿಂದ ಅದು ಹಿಂದಕ್ಕೆ ತಳ್ಳಲ್ಪಟ್ಟು ಗದ್ದೆಗಳಿಗೆ ಹೋಗಿ ಅಲ್ಲಿ ಬೆಳೆದಂತಹ ಬೆಳೆ ನಾಶವಾಗುತ್ತಿದೆ. ಇದನ್ನು ಕಣ್ಣಾರೆ ನೋಡಿ ಎಸ್.ಇ.ಯವರಿಗೆ ಸಹ ಹೇಳಿದ್ದೇನೆ. ಕೆನಾಲ್ ರಸ್ತೆಗಳೂ ಸಹ ಹಾಳಾಗಿವೆ. ಈ ನೀರು ಹೆಚ್ಚಾಗಿ ಬಂದಾಗ ದಡ ಎಲ್ಲಾ ಹೊರಳಿಬಿಟ್ಟು ರಸ್ತೆಗಳು ಇನ್ನಷ್ಟು ಹಾಳಾಗುತ್ತಾ ಇವೆ. ಆದ್ದರಿಂದ ಈಗ ಇರತಕ್ಕಂಥ ಜಲವನ್ನು ನಾವು ಉಳಿತಾಯ ಮಾಡಬೇಕು. ಒಂದು ಹನಿಯೂ ಸಹ ಪೋಲಾಗದ ಹಾಗೆ ನೋಡಿಕೊಳ್ಳಬೇಕು. ಇದಕ್ಕೆ ಜರೂರಾಗಿ ಬೇಸಿಗೆಯಲ್ಲಿ ಮಾತ್ರ ಈ ಕೆಲಸ ಮಾಡುವುದಕ್ಕೆ ಸಾಧ್ಯ. ಆಮೇಲೆ ನೀರಾವರಿ ಬೆಳೆಗಳಿಗೆ ನೀರು ಕೊಟ್ಟ ಮೇಲೆ ಚಾನಲ್ ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ತುರ್ತಾಗಿ ಈ ಬೇಸಿಗೆಯಲ್ಲೇ ಚಾನಲ್ ರಿಪೇರಿ ಕೆಲಸವನ್ನು ತೆಗೆದುಕೊಳ್ಳಬೇಕು. ಇದಕ್ಕೆ ಸಾಕಷ್ಟು ಹಣ ಮೀಸಲಿಡಬೇಕೆಂದು ಹೇಳುತ್ತೇನೆ. ನಾವು ಪ್ರಥಮ ಹಂತದಲ್ಲಿದ್ದೇವೆ. ಶ್ರೀಮತಿ ಮಲ್ಲಾಜಮ್ಮನವರೆಲ್ಲಾ ಕೊನೆಯ ಹಂತದಲ್ಲಿದ್ದಾರೆ. ನೀರು ಫೋರ್ಸ್ ಆಗಿ ಬಂದಾಗ ನಮ್ಮ ಗದ್ದೆಗಳು ಮುಳುಗಿ ಹೋಗುತ್ತವೆ. ಈ ರೀತಿ ಇರುವುದರಿಂದ ಸರ್ಕಾರ ದಯವಿಟ್ಟು ಎಲ್ಲೆಲ್ಲಿ ರಿವರ್ ಚಾನಲ್ಸ್ ಹಾಳಾಗಿವೆ, ಅಲ್ಲಿ ವರ್ಷಾನುಗಟ್ಟಲೆಯಾದರೂ ಯಾವುದೇ ರಿಪೇರ್ಸ್ ಇಲ್ಲ. ಅದಕ್ಕೆ ಕೊಡತಕ್ಕಂಥ ಹಣ ಸಂಬಳ ಸಾರಿಗೆಗೆ ಆಗುತ್ತದೆಯೇ ವಿನಹ ಆಕ್ಚುಯಲ್ ರಿಪೇರ್ಸ್‌ಗೆ ಏನೂ ಇಲ್ಲದ ಹಾಗೆ ಆಗಿದೆ. ದಯವಿಟ್ಟು ಇದನ್ನು ಮಾಡಿಸಿಕೊಡಬೇಕು ಎಂದು ತಮ್ಮ ಮೂಲಕ ಬೇಡಿಕೊಳ್ಳುತ್ತೇನೆ.

ಶ್ರೀ ಜಿ. ರಾಜುಗೌಡ : ಮಾನ್ಯ ಅಧ್ಯಕ್ಷರೇ, ಈ ಕೊಳವೆ ಬಾವಿಗಳಿಗೆ ಸರ್ಕಾರ ಸಾಕಷ್ಟು ಹಣ ಬಿಡುಗಡೆ ಮಾಡಿದರೂ ಕೂಡ ಸಕಾಲದಲ್ಲಿ ಕೆಲಸ ಆಗುತ್ತಿಲ್ಲ. ಇದಕ್ಕೆ ಕಾರಣ ಏನೆಂದರೆ ಇಡೀ ಜಿಲ್ಲೆಗೆ ಒಬ್ಬರೇ ಜಿಯಾಲಾಜಿಸ್ಟ್ ಇರುವುದರಿಂದ ಅವರು ಒಂದು ಪಾಯಿಂಟ್ ಗುರುತು ಮಾಡುವುದಕ್ಕೆ ಬಹಳ ವಿಳಂಬ ಮಾಡುತ್ತಿದ್ದಾರೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕಡೆಗೆ ಗಮನ ಕೊಡಬೇಕು. ಒಂದು ತಾಲ್ಲೂಕಿಗೆ ಒಬ್ಬರು ಜಿಯಾಲಾಜಿಸ್ಟ್ ನೇಮಕ ಮಾಡಿದಾಗ, ಏನು ಹಣ ಬಿಡುಗಡೆ ಮಾಡುತ್ತಾರೆ, ಅದನ್ನು ಮಾಡಿದ ತಕ್ಷಣ ಕೊಳವೆ ಬಾವಿಗಳ ನಿರ್ಮಾಣವಾಗುತ್ತದೆ. ಇಲ್ಲದೇ ಹೋದರೆ, ಇಡೀ ಜಿಲ್ಲೆಯಲ್ಲಿ 12 ತಾಲ್ಲೂಕುಗಳಲ್ಲಿ ಪ್ರತಿಯೊಂದು ಪಾಯಿಂಟ್‌ನಲ್ಲಿ ಕೂಡ ಒಬ್ಬರೇ ಜಿಯಾಲಾಜಿಸ್ಟ್ ಗುರುತು ಮಾಡಬೇಕಾದರೆ ತಿಂಗಳುಗಟ್ಟಲೆ ವಿಳಂಬವಾಗುತ್ತದೆ. ಇದರಿಂದ ಸಕಾಲದಲ್ಲಿ ನೀರು ಬರುವುದಿಲ್ಲ. ದಯವಿಟ್ಟು ತಾವು ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ತಾಲ್ಲೂಕಿಗೆ ಒಬ್ಬ ಜಿಯಾಲಾಜಿಸ್ಟನ್ನು ನೇಮಕ ಮಾಡುವುದಾದರೆ ಬೇಗನೆ ಪಾಯಿಂಟ್‌ಗಳನ್ನು ಗುರುತು ಮಾಡಿ ಕೊಳವೆ ಬಾವಿಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗತಾನೆ ನನಗೆ ಬಂದಿರುವ ಸಮಾಚಾರದ ಪ್ರಕಾರ ನಮ್ಮ ಜಿಲ್ಲೆಯಲ್ಲಿರತಕ್ಕಂಥ ನೆಟ್ಟಳ್ಳಿ ಮತ್ತು ಸುಂಡಳ್ಳಿ ಗ್ರಾಮದಲ್ಲಿ ಕುಡಿಯುವ ನೀರು ಇಲ್ಲದೆ ಕೆಲವು ಜನರು ಎತ್ತಿನ ಗಾಡಿಗಳ ಮೂಲಕ ಬೇರೆ ಕಡೆಯಿಂದ ನೀರು ತಂದು ಮಾರಾಟ ಮಾಡುತ್ತಿದ್ದಾರೆ. ನನಗೆ ಬಂದಿರುವ ಟೆಲಿಗ್ರಾಮ್ ನಲ್ಲಿ ಐದು ಜನರು ಸಹಿ ಹಾಕಿದ್ದಾರೆ. ದಯವಿಟ್ಟು ಈ ನೆಟ್ಟಳ್ಳಿ ಮತ್ತು ಸುಂಡಳ್ಳಿ ಎನ್ನತಕ್ಕಂಥ ಗ್ರಾಮಕ್ಕೆ ತಾವು ಬೇರೆ ಕಡೆಯಿಂದ ನೀರು ಸರಬರಾಜು ಮಾಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಮಂತ್ರಿ) : ದಿನಾಂಕ 19.3.91ರಂದು ಈ ಕುಡಿಯುವ ನೀರಿನ ಬಗ್ಗೆ ನಾನು ಇಲ್ಲಿ ಸುದೀರ್ಘವಾದ ಹೇಳಿಕೆಯನ್ನು ಕೊಟ್ಟಿದ್ದೇನೆ. ಅದರ

ಪ್ರಕಾರ ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿಯನ್ನು ಎಂ.ಎಲ್.ಎ.ಗಳ ಅಧ್ಯಕ್ಷತೆಯಲ್ಲಿ ಮಾಡಬೇಕೆಂದು ಹೇಳಿ ಬಿಟ್ಟು ಮಾಡಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಆರ್ಡರ್ ಹೊರಟಿದೆಯೇ ಏನು?

ಶ್ರೀ ಬಿ. ಬಸವಲಿಂಗಪ್ಪ : ಆರ್ಡರ್ ಹೋಗಿದೆ, ಪ್ರತಿಗಳನ್ನು ಕೊಡುತ್ತೇನೆ. ಇದು ಹಂಗಾಮಿಯಾಗಿ ಎರಡು ತಿಂಗಳ ಅವಧಿಗೆ ಎಂ.ಎಲ್.ಎ.ಗಳ ಅಧ್ಯಕ್ಷತೆಯಲ್ಲಿ ಯಾವ್ಯಾವ ಊರಿಗೆ ಏನು ಅಭಾವ ಇದೆ, ಅಲ್ಲಿ ಸಮಿತಿಗಳನ್ನು ಮಾಡಿದ್ದೇವೆ. ಅಲ್ಲಿ ಬಿಡಿಒ. ತಹಸೀಲ್ದಾರ್ ಅಸಿಸ್ಟೆಂಟ್ ಇಂಜಿನಿಯರ್ ಇದ್ದು ಇವರ ಸಲಹೆ ಮೇರೆಗೆ ತಕ್ಷಣ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕು ಎಂದು ಮಾಡಿದ್ದೇವೆ. ನಾನು ಸ್ಪಷ್ಟವಾಗಿ ಹೇಳಿದ್ದೇನೆ, ತಾಲ್ಲೂಕು ಪಂಚಾಯತಿ ಸಮಿತಿಗೆ ಎಂ.ಎಲ್.ಎ.ಗಳೇ ಅಧ್ಯಕ್ಷರಾಗಿದ್ದಾರೆ. ಈಗ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿದ್ದೇವೆ. ಹಣದ ವಿಚಾರದಲ್ಲಿ ಯಾವ ಕೊರತೆಯೂ ಇಲ್ಲ. ಇದರ ಬಗ್ಗೆ ದಯವಿಟ್ಟು ಪುನಃ ಕೇಳಬೇಡಿ. ಕಷ್ಟ ಇದೆ, ಪರಿಹಾರ ಮಾಡಲೇಬೇಕು. ಮಾನ್ಯ ಸದಸ್ಯರು ಹೇಳಿದ ಹಾಗೆ ಬೋರ್‌ವೆಲ್‌ಗಳನ್ನು ಕೊರೆಯುತ್ತಾ ಕೊರೆಯುತ್ತಾ ನಾವು ಎಲ್ಲಿಗೆ ಹೋಗಿದ್ದೇವೆ ಎಂದರೆ, 450 ಅಡಿಗಳವರೆಗೆ ಹೋಗಿದ್ದೇವೆ. ಮೊನ್ನೆ ಮಾಲೂರು ತಾಲ್ಲೂಕಿಗೆ ಹೋಗಿದ್ದೆ. ಅಲ್ಲಿ ಹೋದರೆ ಬರೀ ನೀಲಗಿರಿ ಮಾರಗಳು ಬೇರೆ ಪೈರೇ ಇಲ್ಲ, ನೀಲಗಿರಿ ಮರವೇ ಪೈರು. ಮೈಲಿಗಟ್ಟಲೆ ಇವುಗಳನ್ನು ನೋಡಿದ ಮೇಲೆ ನನಗನ್ನಿಸುತ್ತದೆ, ಇವತ್ತು ಎಲ್ಲೆಲ್ಲಿ ನೀಲಗಿರಿ ಬೆಳೆಯುತ್ತವೆ ಅಲ್ಲೆಲ್ಲಾ ನೀರಿನ ಮಟ್ಟ ಕೆಳಕ್ಕೆ ಹೋಗುತ್ತಿದೆ. ಅಲ್ಲಿ ನೀರಿನ ಮಟ್ಟ ಇನ್ನೂರು, ಮುನ್ನೂರು ಅಡಿ ಕೆಳಗಿದೆ.

ಇವತ್ತು ಎಲ್ಲಿ ನೋಡಿದರೂ ನೀಲಗಿರಿ ಮರಗಳೇ ಬೆಳೆದಿವೆ. ಮಾನ್ಯ ಅಧ್ಯಕ್ಷರೇ ಹೇಳುತ್ತಾ ಇದ್ದರು, 400 ಅಡಿ ಕೊರೆದರೆ ನೀರು ಬರುತ್ತದೆ ಎಂದು. ಆದರೆ 450 ಅಡಿ ಕೊರೆದರೂ ನೀರು ಬರುತ್ತಾ ಇಲ್ಲ. ಮುಂದೆ ಏನು ಮಾಡಬೇಕು, ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಮಾನ್ಯ ಸದಸ್ಯರುಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದೇವೆ. ಅಭಾವ ಪರಿಸ್ಥಿತಿಯಲ್ಲಿ ಎಲ್ಲೆಲ್ಲಿ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂಬ ಬಗ್ಗೆ ಸಮಿತಿಯವರು ತೀರ್ಮಾನ ತೆಗೆದುಕೊಳ್ಳುತ್ತಾರೆ. ಸಮಿತಿಯವರು ಎಲ್ಲೇ ಮಾಡಲಿ, ಹಣದ ಚಿಂತೆ ಇಲ್ಲ, ನಾವು ಹಣವನ್ನು ಒದಗಿಸುತ್ತೇವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ಬೋರ್ ಕೊರೆಯುವ ಬಗ್ಗೆ ಸದನ ತೀರ್ಮಾನ ತೆಗೆದುಕೊಳ್ಳಬೇಕು. ಮಾನ್ಯ ನಜೀರ್ ಸಾಬ್‌ರವರು ಇದ್ದಾಗ ಈ ವಿಚಾರದಲ್ಲಿ ಚಳುವಳಿ ಮಾಡಿದರು. ಎಲ್ಲಾ ಗ್ರಾಮಗಳಿಗೂ ನೀರು ಒದಗಿಸಿಕೊಡಬೇಕೆಂದು ಚಳುವಳಿ ಮಾಡಿ, ಎಲ್ಲಾ ಗ್ರಾಮಗಳಿಗೂ ನೀರು ಒದಗಿಸಿದರು. ಇವತ್ತು ಅಭಾವ ಪರಿಸ್ಥಿತಿಯಲ್ಲಿ, ಹಾಲಿ ಇರತಕ್ಕ ಬೋರ್ ವೆಲ್‌ಗಳೆಲ್ಲವೂ ಮೇಲೆಯೇ ಇವೆ. ಇವು 100-150 ಅಡಿ ಬೋರ್ ವೆಲ್‌ಗಳು. ಇವತ್ತು ಇದಕ್ಕಿಂತ ಕೆಳಕ್ಕೆ ಹೋಗಬೇಕು. 200 ಅಡಿ ಕೆಳಗೆ ಹೋದರೂ ನೀರು ಇಲ್ಲ. 300 ಅಡಿ ತೆಗೆದರೂ ನೀರು ಇಲ್ಲ. 200 ಅಡಿ ಆಳದ ಬೋರ್ ಗಳಲ್ಲಿ ನೀರು ಖಾಲಿ, ಬರಿದಾಗಿದೆ. ಮುಂದೆ ಕೊರೆದುಕೊಂಡು ಹೋಗುವುದೇ ಹೇಗೆ ಎಂಬುದನ್ನು ಚಿಂತೆ ಮಾಡುತ್ತಿದ್ದೇವೆ. ನಜೀರ್ ಸಾಬ್ ಕಾಲದಲ್ಲಿ ಮಾಡಿದರು, ಆಗ ನೀರು ಮೇಲೆಯೇ ಸಿಗುತ್ತಿತ್ತು. 100-150 ಅಡಿ ಆಳದಲ್ಲಿ ನೀರು ಸಿಗುತ್ತಿತ್ತು. ಇವತ್ತು ಇನ್ನೂ ಕೆಳಗೆ ಹೋಗಿದೆ. ಹಳೆಯ ಬೋರ್‌ವೆಲ್‌ಗಳು ಖಾಲಿ ಆಗಿವೆ. ಬರಡಾಗಿವೆ. ಈ ಸಮಸ್ಯೆಯನ್ನು ಕೂಲಂಕುಷವಾಗಿ ವಿಚಾರ ಮಾಡಿ, ವ್ಯವಸ್ಥೆ ಮಾಡಲು ತಾಲ್ಲೂಕು ಪಂಚಾಯಿತಿ ಮಟ್ಟದ ಸಮಿತಿ ಮಾಡಿದ್ದೇವೆ. ಅವರು ನಿರ್ಣಯ ತೆಗೆದುಕೊಳ್ಳುತ್ತಾರೆ. ಅವರು ಯಾವುದೇ ನಿರ್ಣಯ ತೆಗೆದುಕೊಂಡರೂ ನನಗೆ ಅಭ್ಯಂತರ ಇಲ್ಲ, ನಾವು ಇಲ್ಲಿಂದಲೇ ಹುಕುಂ ಮಾಡುವುದು

ಬೇಡ ಎಂದು ಸಮಿತಿ ಮಾಡಿದ್ದೇವೆ. ಅದೂ ಕೂಡ ನಿಮ್ಮ ಸಲಹೆ ಮೇರೆಗೆ ಸಮಿತಿ ಮಾಡಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ತಾಲ್ಲೂಕು ಪಂಚಾಯಿತಿ ಮಟ್ಟದ ಸಮಿತಿಗೆ ಎಷ್ಟು ಹಣ ಕೊಟ್ಟಿದ್ದೀರಿ ಎಂಬುದನ್ನು ಹೇಳಿ. ಇಷ್ಟು ಹಣ ಕೊಟ್ಟಿದ್ದೇವೆಂದು ಹೇಳಿದರೆ, ಏನಾದರೂ ಜನಕ್ಕೆ ಉಪಯೋಗವಾಗುತ್ತದೆ. ಬರೀ ಸಮಿತಿ ತೆಗೆದುಕೊಂಡು, ತಲೆಮೇಲೆ ಹಾಕಿಕೊಳ್ಳುವುದೇ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ಸರ್ಕಾರ ನೀರಿನ ವ್ಯವಸ್ಥೆಗಾಗಿ ಇಷ್ಟು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಬೇಕು. ಇಂದು ಸದನದ ಕೊನೇ ದಿವಸ, ನಾವು ಇವರ ಹತ್ತಿರ ಬಂದು ತಿರುಗಾಡುವುದಕ್ಕಾಗುವುದಿಲ್ಲ. ಮಾನ್ಯಮಂತ್ರಿಗಳು ಇವತ್ತೇ ಹೇಳಬೇಕು.

(ಗೊಂದಲ)

ಶ್ರೀ ಎಸ್. ಚಿಕ್ಕೇಗೌಡ : ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಹೆಚ್ಚು ಕಾಳಜಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ನೀಲಗಿರಿ ಗಿಡ ಇರಲಿ, ಇಲ್ಲದೇ ಇರಲಿ. ನೀಲಗಿರಿ ಗಿಡದಿಂದಲೇ ನೀರಿನ ಅಂಶ ಕಡಿಮೆಯಾಗಿದೆ ಎಂದಲ್ಲ. ಮಳೆ ಇಲ್ಲ, ನೀರಿನ ಅಂಶ 300-400 ಅಡಿ ಕೆಳಗೆ ಹೋಗುತ್ತಿದೆ, ಇದನ್ನು ಒಪ್ಪಿಕೊಳ್ಳಬಹುದು. ಆದರೆ ನೀಲಗಿರಿ ಗಿಡದಿಂದಲೇ ಹೋಗುವುದಿಲ್ಲ. ವೃಕ್ಷಸಂಪತ್ತು, ಒಳ್ಳೆಯ ವಾತಾವರಣ, ಪರಿಸರ ಮಾಲಿನ್ಯ ಮತ್ತು ಇವು ನೀರು ಹೆಚ್ಚು ಕುಡಿಯುತ್ತವೆ ಎಂಬ ವಿಚಾರದಲ್ಲಿ ಬಹಳ ವಾಗ್ವಾದ ಇದೆ. ಆದ್ದರಿಂದ ಇದೇ ಒಂದು ಕಾರಣವಲ್ಲ ಎಂಬುದನ್ನು ತಮ್ಮ ಮೂಲಕ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಮಂತ್ರಿಗಳಿಂದ ಸ್ಪಷ್ಟವಾದ ಉತ್ತರವನ್ನು ಕೇಳುವುದಕ್ಕೆ ಬಯಸುತ್ತೇನೆ. ಕಮಿಟಿ ಮಾಡುವುದರಿಂದ ನೀರಿನ ಬರ ಪರಿಹಾರವಾಗುವುದಿಲ್ಲ. ದಯಮಾಡಿ, ಒಂದೊಂದು ತಾಲ್ಲೂಕಿನಲ್ಲಿ ಎಷ್ಟು ಹಣ ಒದಗಿಸುತ್ತೀರಿ, ಎಷ್ಟು ಬಾವಿ ತೋಡಿಸುತ್ತೀರಿ ಎಂಬುದನ್ನು ಹೇಳಿದರೆ ನಾವು ನೆಮ್ಮದಿಯಿಂದ ಇರಬಹುದು. ಇವತ್ತು ಸದನದ ಕೊನೇ ದಿವಸ, ಸರ್ಕಾರದ ನಿಲುವು ಏನು, ದಯಮಾಡಿ ತಾವು ಆಶ್ವಾಸನೆ ಕೊಡಿಸಲೇಬೇಕು. ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ, ಒಂದು ತಿಂಗಳಲ್ಲಿ ಎಷ್ಟು ಬಾವಿಗಳನ್ನು ತೆಗೆಸುತ್ತಾರೆ ಎಂಬುದನ್ನು ಹೇಳಬೇಕು. ಇಲ್ಲದಿದ್ದರೆ ನಮಗೆ ಹಣ ಕೊಡಲಿ, ನಾವೇ ಬಾವಿ ತೋಡಿಸತಕ್ಕ ವಿರ್ಪಾಡು ಮಾಡಿಕೊಳ್ಳುತ್ತೇವೆ. ಇಲ್ಲಿ ಸುಮ್ಮನೆ ಭಾಷಣ ಮಾಡಿ ಹೋದರೆ ಪ್ರಯೋಜನವಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡುತ್ತಿದ್ದಾರೆ, ದಯಮಾಡಿ ಮಧ್ಯೆ ಎದ್ದು ಮಾತನಾಡಬೇಡಿ.

ಶ್ರೀ ಎಂ. ಸಿದ್ದಮಾದಯ್ಯ : ಹಳ್ಳಿಗಳ ನೀರಿನ ಸಮಸ್ಯೆ ಬಗ್ಗೆ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನಾನು ಹೇಳುವುದು ಪಟ್ಟಣದ ಸಮಸ್ಯೆ.....

ಅಧ್ಯಕ್ಷರು : ಪಟ್ಟಣದ ಸಮಸ್ಯೆ ಬಗ್ಗೆ ಆನಂತರ ಬರುತ್ತೇವೆ, ಮಾನ್ಯ ಜಾರ್ಜ್‌ರವರೂ ಇದ್ದಾರೆ. ಈಗ ವಿಲೇಜ್ ಸಮಸ್ಯೆಯನ್ನು ವಿಲೇವಾರಿ ಮಾಡಿ, ಆನಂತರ ಪಟ್ಟಣಕ್ಕೆ ಹೋಗೋಣ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕಮಿಟಿ ಮಾಡಿದ್ದೇವೆಂದು ಹೇಳಿದರು, ಸಂತೋಷ. ನಾನು ಈ ವಿಚಾರದಲ್ಲಿ ಎರಡು ಮೂರು ಸಲಹೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

11.10 ಎ.ಎಂ.

ತಾವು ತಾಲ್ಲೂಕು ಸಮಿತಿ ಮಾಡಿರುತ್ತೀರಿ. ನಮ್ಮ ಭಾಗದಲ್ಲಿ ಪ್ರಾಬ್ಲಂ ಬರುವುದಿಲ್ಲ. ಮೂರು ಮೂರು ತಾಲ್ಲೂಕಿಗೆ ಒಬ್ಬೊಬ್ಬರು ಎಂ.ಎಲ್.ಎ.ಗಳು ಇದ್ದಾರೆ. ಆದರೆ ಬೇರೆ ಜಿಲ್ಲೆಯಲ್ಲಿ ಒಂದೊಂದು ತಾಲ್ಲೂಕಿನಲ್ಲಿ 2-3 ಜನ ಎಂ.ಎಲ್.ಎ.ಗಳು ಇದ್ದಾರೆ. ಅಲ್ಲಿ ತಾವು ಸಮಿತಿ ಮಾಡಿದಾಗ ತಾಲ್ಲೂಕಿಗೆ ಸಂಬಂಧಪಟ್ಟ ಎಲ್ಲಾ ಎಂ.ಎಲ್.ಎ.ಗಳನ್ನೂ ಆ ಸಮಿತಿಯ ಸದಸ್ಯರನ್ನಾಗಿ ಮಾಡಬೇಕಾಗುತ್ತದೆ. ಎರಡನೆಯದು ಬಹಳ ವೇದನೆಯಿಂದ ನಾನು ತಮ್ಮ ಮುಂದೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಹಣದ ಬಗ್ಗೆ ಚಿಂತೆ ಇಲ್ಲ ಎಂದು ತಾವು ಹೇಳಿದ್ದೀರಿ. ಸಂತೋಷ. ಆದರೆ ಪ್ರತಿಯೊಂದು ಜಿಲ್ಲೆಗೆ ಒಂದು ಅಲೊಕೇಷನ್ ಮಾಡಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಏತಕ್ಕೆಂದರೆ ಅಧಿಕಾರಿಗಳು ಸಹ ಎಲ್ಲೆಲ್ಲಿ ಯಾವ ಪ್ರಕಾರ ಡಿಮ್ಯಾಂಡ್ ಇದೆ, ಆ ಪ್ರಕಾರ ಹಣವನ್ನು ಹಂಚುವುದಕ್ಕೆ ಸಾಧ್ಯವಾಗುತ್ತದೆ. ಅದರಿಂದ ಕೆಲಸ ಬೇಗನೆ ಆಗಲೂಬಹುದು. ಬೆಂಗಳೂರಿನಲ್ಲಿ ಹಣ ಇರಬಹುದು, ಆದರೆ ಅಲ್ಲಿ ಹಣ ಎಷ್ಟಿದೆ ಎಂದು ಗೊತ್ತಾದ ನಂತರ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮಾರನೆಯದಾಗಿ ನಾನು ಉತ್ತರ ಕನ್ನಡ ಜಿಲ್ಲೆಯಿಂದ ಬರುತ್ತಿದ್ದೇನೆ. ಅಲ್ಲಿ ರಿಗ್ ಸಮಸ್ಯೆ ಬಹಳವಾಗಿದೆ. ರಿಗ್‌ಗಳು ಎಷ್ಟು ಪ್ರಮಾಣದಲ್ಲಿ - ಬೇಕೋ ಅಷ್ಟು ಪ್ರಮಾಣದಲ್ಲಿ ಸಿಗುತ್ತಿಲ್ಲ. ಎಲ್ಲಾ ಕಡೆ ಸ್ಕೇರ್ಸಿಟಿ ಇರುವುದರಿಂದ ಎಲ್ಲಾ ಕಡೆ ಡಿಮ್ಯಾಂಡ್ ಇದೆ. ತಾವು ಮಹಾರಾಷ್ಟ್ರ, ಆಂಧ್ರಪ್ರದೇಶ ರಾಜ್ಯಗಳಿಗೆ ಸಂಪರ್ಕಿಸಿ ರಾಜ್ಯಕ್ಕೆ ಹೆಚ್ಚು ರಿಗ್ ಯಂತ್ರಗಳನ್ನು ತರುವುದಕ್ಕೆ ಪ್ರಯತ್ನ ಮಾಡಿದರೆ ಈ ಸಮಸ್ಯೆ ಆದಷ್ಟು ಬೇಗ ಪರಿಹಾರವಾಗಬಹುದೆಂದು ನನ್ನ ಅನಿಸಿಕೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಈಗ ತಾವು ತಮಿತಿ ಮಾಡಿದ್ದೀರಿ, ಆದರೆ ಅದಕ್ಕೆ ಹಣ ಇಷ್ಟು ಎಂದು ಒದಗಿಸಿ ಎಂದು ನಮ್ಮ ಗುರುಪಾದಪ್ಪನವರು ಹೇಳಿದರು. ಇದು ಬಹಳ ಒಳ್ಳೆಯ ಸಲಹೆ. ಸಂಪುಟದಲ್ಲಿ ವಿಚಾರ ಮಾಡಿ ಇಂದೇನು ಮಳೆ ಇಲ್ಲದೆ ಏನು ಪರಿಸ್ಥಿತಿ ಬಂದಿದೆ, ಎಷ್ಟೇ ಹಣ ಖರ್ಚಾಗಲೀ ಅದನ್ನು ನಿಭಾಯಿಸಬೇಕೆಂದು ತೀರ್ಮಾನ ಮಾಡಿರುತ್ತೇವೆ. ತಮ್ಮ ಸಲಹೆ ಪ್ರಕಾರ ಹಣವನ್ನು ಜಿಲ್ಲೆಗಳಿಗೆ ಹಂಚುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎಷ್ಟೆಷ್ಟು ಎಂದು ಈಗ ತಕ್ಷಣ ಹೇಳಬೇಕೆಂದರೆ ಅದಕ್ಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ದಯವಿಟ್ಟು ಇದನ್ನು ಅಷ್ಟಕ್ಕೇ ಬಿಡಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಸಭೆ ಮುಗಿಯುವುದರೊಳಗೆ ಇದನ್ನು ಹೇಳಬೇಕು. ಇಲ್ಲದಿದ್ದರೆ ಹಳ್ಳಿಗಳಿಗೆ ನಾವು ಹೋಗುವಹಾಗೆ ಇಲ್ಲ. ಇವತ್ತು ಸಂಜೆಯ ಒಳಗೆ ಸರಕಾರ ಕುಡಿಯುವ ನೀರಿಗೆ ಎಷ್ಟು ಕೋಟಿ ಹಣ ಬಿಡುಗಡೆ ಮಾಡುತ್ತದೆ, ಅದರಲ್ಲಿ ಜಿಲ್ಲೆಗೆ ಎಷ್ಟು, ತಾಲ್ಲೂಕಿಗೆ ಎಷ್ಟು ಎಂಬುದನ್ನು ಹೇಳಬೇಕು. ಇದು ಗಂಭೀರವಾದ ಪ್ರಶ್ನೆ. ಮಾನ್ಯ ಸಚಿವರು ಹಣ ಬಿಡುಗಡೆ ಮಾಡದೇ ನಮ್ಮ ಕ್ಷೇತ್ರಕ್ಕೆ ಬಂದರೆ ಪರಿಸ್ಥಿತಿ ನಿಮಗೇ ಗೊತ್ತಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ : ಈಗ ಪ್ರೈವೇಟ್ ರಿಗ್‌ನವರು ಬೇರೆ ಇದ್ದಾರೆ ಸರಕಾರದವರೇ ರಿಗ್ ಮಾಡತಕ್ಕಂಥ ವ್ಯವಸ್ಥೆ ಕೂಡ ಇದೆ. ಪ್ರೈವೇಟ್ ರಿಗ್ಸ್‌ದು ಬೇರೆ ರೇಟ್ ಇದೆ. ಮಾನ್ಯ ಬೈರೇಗೌಡರು ಹೇಳಿದಹಾಗೆ, ನಾನು ಮಾಲೂರಿಗೆ

ಹೋದಾಗ ನನಗೆ ತಿಳುವಳಿಕೆಗೆ ಬಂದ ಹಾಗೆ, ಇದರ ರೇಟ್ ಜಾಸ್ತಿ ಮಾಡಬೇಕೆಂದು ಹೇಳುತ್ತಿದ್ದಾರೆ. 200 ರೂ. ಮಾಡಬೇಕು. 175 ರೂ. ಮಾಡಬೇಕೆಂದು ಹೇಳಿದ್ದಾರೆ. ನಾನು ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಇದನ್ನೆಲ್ಲಾ ಟೆಂಡರ್ ಕರೆಯಬೇಕು, ಮಾಡಬೇಕು ಎಂದರೆ ಈಗ ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಒಂದು ನಿರ್ಧಾರ ಇವತ್ತು ಅಥವಾ ನಾಳೆ ತೆಗೆದುಕೊಳ್ಳುತ್ತೇವೆಂದು ಈ ಸಭೆಗೆ ಆಶ್ವಾಸನೆಯನ್ನು ಕೊಡುತ್ತೇನೆ.

ಅಧ್ಯಕ್ಷರು : ಬೈರೇಗೌಡರು ಏನು ಪಾಯಿಂಟ್‌ಔಟ್ ಮಾಡಿದರು ಎಂದರೆ ಪ್ಯಾರಲಲ್ ಡೆವೆಲಪ್‌ಮೆಂಟ್ ನಡೆಯುತ್ತಿದೆ. ಡಿಸ್ಟ್ರಿಕ್ಟ್‌ನಲ್ಲಿ ಒಂದು ರಿಲೀಫ್ ಮೆಜರ್ಸ್ The Deputy Commissioner takes a decision ತೆಗೆದುಕೊಂಡು ಇಷ್ಟು ಮೀಟರ್‌ಗೆ ಇಷ್ಟು ದುಡ್ಡು ಎಂದು ಕೊಡುತ್ತಿದ್ದಾರೆ. Zilla Parishad, as you know, is bound by certain directions given by the Government and they are unable to take any decision with reference to this very point. So, this confusion has got to be cleared.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಈಗ ಡಿ.ಸಿ.ಗೆ ಕೊಡತಕ್ಕಂಥ ಹಣ ಬೇರೆ, ನಾವು ಜಿಲ್ಲಾ ಪರಿಷತ್‌ನಿಂದ ಖರ್ಚು ಮಾಡತಕ್ಕಂಥ ಹಣ ಬೇರೆ. ಅವರಿಗೆ ಸೀಮಿತರಾಗಿರತಕ್ಕಂಥಾದ್ದು ಡಿ.ಸಿ. ಕೊಡತಕ್ಕಂಥ ಹಣ. ಜಿಲ್ಲಾ ಪರಿಷತ್ ಇದಕ್ಕೆ ಸೀಮಿತ ಏನಿಲ್ಲ. ನಾವು ಸಮಗ್ರ ತೀರ್ಮಾನ ಮಾಡಿಕೊಂಡಿದ್ದೇವೆ. ಪ್ರತಿ ತಾಲ್ಲೂಕಿನಲ್ಲಿಯೂ ಕೂಡ ಎಂತಹ ಅಭಾವ ಪರಿಸ್ಥಿತಿಯಲ್ಲೂ ಕೂಡ ನಾವು ಜನಗಳಿಗೆ ಇದೊಂದು ಕಷ್ಟವನ್ನು ನಿವಾರಣೆ ಮಾಡಬೇಕೆಂದು ತೀರ್ಮಾನ ಮಾಡಿರುತ್ತೇವೆ. ಅದಕ್ಕೋಸ್ಕರ ನಾವು ಇನ್‌ಸ್ಟ್ರಕ್ಷನ್ಸ್ ಕೂಡ ಕೊಟ್ಟಿದ್ದೇವೆ. ಮೀಟಿಂಗ್ ಮಾಡಿ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇವೆ. ಈಗ ಎಲ್ಲಿ ದೂರು ಕೇಳಿ ಬರುತ್ತಿದೆ, ಅಲ್ಲಿ ಮಾಡಿಲ್ಲ, ಇಲ್ಲಿ ಮಾಡಿಲ್ಲ ಎಂದು, ಮಾನ್ಯ ಸದಸ್ಯರು ಅಧ್ಯಕ್ಷರಾಗಿರುವುದರಿಂದ ತಾವೇ ತೀರ್ಮಾನ ತೆಗೆದುಕೊಳ್ಳಿರಿ, ಎಷ್ಟು ಬೋರ್ ಮಾಡುತ್ತೀರಿ ಮಾಡಿರಿ. ಅದಕ್ಕೆ ಹಣ ಒದಗಿಸತಕ್ಕಂಥಾದ್ದಕ್ಕೆ ಕೊರತೆ ಇಲ್ಲ ಎಂದು ಹೇಳಿದ್ದೇನೆ. ಮತ್ತು ಜಿಲ್ಲೆಗೆ ಎಷ್ಟೆಷ್ಟು ಕೊಡುತ್ತೀರಿ. ಪಂಚಾಯತ್ ಸಮಿತಿಗೆ ಎಷ್ಟೆಷ್ಟು ಕೊಡುತ್ತೀರಿ ಎಂದು ಹೇಳಿದ್ದಾರೆ, ನಾನು ಅದನ್ನು ತೀರ್ಮಾನ ಮಾಡುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ ಒಂದೊದು ತಾಲ್ಲೂಕಿಗೆ ಎಷ್ಟೆಷ್ಟು ಹಣ ಕೊಡುತ್ತೀರಿ? ಹಣ ಕೊಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಈ ಸದನ ಮುಗಿಯುವುದರೊಳಗೆ ಮಾನ್ಯ ಮಂತ್ರಿಗಳು ಹೇಳಬೇಕು.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಜನಗಳಿಗೆ ನೀರು ಕೊಡಲಿಲ್ಲವೆಂದರೆ ನೀವು ಚುನಾವಣೆಗೆ ಹೋದಾಗ ಜನ ನಿಮಗೆ ನೀರು ಕುಡಿಸಿ ಕಳುಹಿಸುತ್ತಾರೆ.

(ಗೊಂದಲ)

ಶ್ರೀ ಬಿ.ಎಚ್. ಬನ್ನಿಕೋಡ್ : ಕುಡಿಯುವ ನೀರಿಗೆ ಸರ್ಕಾರ ಹಣ ಕೊಡಲಿಲ್ಲವೆಂದರೆ ನಾವು ಹಳ್ಳಿಗಳಿಗೆ ಹೋಗುವಂತೆ ಇಲ್ಲ....

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ಮತ್ತೊಂದು ಸಾರಿ ಗಮನಕ್ಕೆ ತರತಕ್ಕಂಥ ವಿಚಾರ ಏನೆಂದರೆ ಈಗ ಡ್ರಿಲ್ಲಿಂಗ್ ರೇಟ್ ಬಗ್ಗೆ ಮತ್ತು ಕುಡಿಯುವ ನೀರಿನ ವಿಚಾರವನ್ನು ನಾವು ಇಲ್ಲಿ ನಾಲ್ಕನೆಯ ಸಾರಿ ಪ್ರಸ್ತಾಪ ಮಾಡುತ್ತಿದ್ದೇವೆ. ಇದರ ಬಗ್ಗೆ ಇನ್ನು ಯಾವ ತರಹ ಹೇಳಬೇಕೋ ಗೊತ್ತಾಗುತ್ತಿಲ್ಲ. ಸ್ಥಳಕ್ಕೆ ಹೋದರೆ ನಮಗೆ ಎಷ್ಟು ಸಿಟ್ಟು ಬರುತ್ತದೆ ಎಂದರೆ, ಜನ ಬಂದು

ನಮ್ಮನ್ನು ಪದೆಪದೇ ನೀರು ಕೊಡಿ ಎಂದು ಕೇಳುತ್ತಾರೆ. ಈ ಎಲ್ಲಾ ವ್ಯವಸ್ಥೆಯನ್ನು ಕೂಡ ಸರ್ವನಾಶ ಮಾಡಬೇಕೆನ್ನುವಷ್ಟು ಸಿಟ್ಟು ನನಗೆ ಬರುತ್ತದೆ. ಕುಡಿಯುವ ನೀರಿನ ಬಗ್ಗೆ ನಾಲ್ಕು ಸಾರಿ ಇಲ್ಲಿ ಚರ್ಚೆ ಆಗಿದೆ. ರೇಟ್ ಬಗ್ಗೆ ಇನ್ನು ಒಂದೆರಡು ದಿವಸಗಳಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಹೇಗೆ? ಮೊದಲನೆ ಸಾರಿ ಈ ವಿಷಯ ಅವರನ್ನು ಕಾಡಿಸಿತು. ಎರಡನೆಯ ಸಾರಿ ಅವರನ್ನು ಈ ವಿಷಯ ಕಾಡಿಸಿತು. ಮೂರನೇ ಸಾರಿ ಕಾಡಿಸಿತು. ನಾಲ್ಕನೇ ಸಾರಿ ಈ ವಿಷಯ ಅವರನ್ನು ಕಾಡಿಸಿದರೂ ಸಹ ಅವರು ಇವತ್ತು ಇನ್ನು ಒಂದೆರಡು ದಿವಸಗಳಲ್ಲಿ ನಿರ್ಧಾರ ತೆಗೆದುಕೊಳ್ಳುತ್ತೇವೆಂದು ಹೇಳುವುದರ ಅರ್ಥ ಏನು? ತಮ್ಮ ಗಮನಕ್ಕೂ ಕೂಡ ನಾನು ತಂದಿದ್ದೇನೆ. ಜಿಲ್ಲಾಧಿಕಾರಿಗಳಿಗೆ ಕೊಡತಕ್ಕಂಥ ಹಣ ಬೇರೆ. ಜಿಲ್ಲಾ ಪರಿಷತ್ತುಗಳಿಗೆ ಕೊಡತಕ್ಕಂಥ ಹಣ ಬೇರೆ ಎಂದು ಅವರು ಹೇಳಿದರು ನಿಜ ನಾನು ಒಪ್ಪಿಕೊಳ್ಳುತ್ತೇನೆ. ಹಣ ಯಾರದೇ ಆಗಿರಲಿ ಜನಗಳಿಗೆ ಕುಡಿಯುವ ನೀರು ಬಹಳ ಮುಖ್ಯ. ಇದು ಜಿಲ್ಲಾ ಪರಿಷತ್ತು ಬೋರ್‌ವೆಲ್ ಇದರಲ್ಲಿ ಒಂದು ತರಹ ನೀರು ಸರ್ಕಾರದಿಂದ ಬರಗಾಲ ಕಾಮಗಾರಿಯಲ್ಲಿ ಮಾಡಿಸುತ್ತಿರುವಂತಹ ಬೋರ್‌ವೆಲ್ ಇದರಲ್ಲಿ ಬೇರೆ ಒಂದು ತರಹದ ಬಣ್ಣದ ನೀರು ಬರುತ್ತದೆಂದು ಏನಾದರೂ ಇದೆಯೇ ಮಾನ್ಯ ಅಧ್ಯಕ್ಷರೇ? ಇರತಕ್ಕಂಥಾದ್ದು ಎಲ್ಲಾ ಒಂದೇ ನೀರು ಒಟ್ಟಿನಲ್ಲಿ ಜನಗಳಿಗೆ ನೀರು ಬೇಕು. ನಾವು ಈಗಾಗಲೇ ಸರ್ಕಾರದಲ್ಲಿ ಮನವಿ ಮಾಡಿದ್ದೇವೆ. ಇರತಕ್ಕಂಥ ಪರಿಸ್ಥಿತಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇವೆ. ಅಲ್ಲಿ ಈಗಾಗಲೇ ಕೆಲಸ ನಡೆಯುತ್ತಿದೆ. ಕೊಳವೆ ಬಾವಿಗಳು ಆಗುತ್ತಿವೆ. ಜಿಲ್ಲಾ ಪರಿಷತ್ತಿನಿಂದ ಇವತ್ತು ಸಂಪೂರ್ಣವಾಗಿ ಕೆಲಸ ನಿಂತು ಹೋಗಿದೆ. ಅಲ್ಲಿ ಏನೂ ಕೆಲಸ ಆಗುತ್ತಿಲ್ಲ. ಅದ್ದರಿಂದ ಸರ್ಕಾರ ನಾಳೆ ನಾಡಿದ್ದು ತೀರ್ಮಾನ ತೆಗೆದುಕೊಂಡರೆ ಹೇಗೆ? ಈ ಸದನದಲ್ಲಿ ತಾವು ಹೇಳಬೇಕು. ಅಧಿಕಾರಿಗಳು ಕೊಟ್ಟಿರತಕ್ಕಂಥ ವರದಿ ಸರ್ಕಾರದ ಬಳಿ ಇದೆ. ನಮ್ಮ ಕಷ್ಟವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದೇವೆ. ದಯಮಾಡಿ ಈಗಲೇ ಒಪ್ಪಿಗೆ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ ಇಡೀ ರಾಜ್ಯದಲ್ಲಿ ತೀವ್ರವಾಗಿರತಕ್ಕಂಥ ಕುಡಿಯುವ ನೀರಿನ ಅಭಾವ ಇದೆ. ಇದು ತಮಗೂ ಸರ್ಕಾರಕ್ಕೂ ಗೊತ್ತಿರತಕ್ಕಂಥ ವಿಚಾರ. ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ಈ ಬಗ್ಗೆ ಭರವಸೆಗಳನ್ನು ಆಶ್ವಾಸನೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೊಟ್ಟಿದ್ದರೆ ತಾವು ಕೊಟ್ಟಿದ್ದೀರಿ. ಆದರೆ ವಸ್ತು ಸ್ಥಿತಿ ಏನು ಇದೆ? ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ತಮ್ಮ ಗಮನಕ್ಕೂ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ವಸ್ತು ಸ್ಥಿತಿ ಏನೆಂದರೆ ಆ ಅಧಿಕಾರಿಗಳ ಹೆಸರನ್ನು ನಾನು ಹೇಳುವುದಕ್ಕೆ ಬಯಸುವುದಿಲ್ಲ. ಜಿಲ್ಲಾ ಪರಿಷತ್ತು ಮುಖ್ಯ ಕಾರ್ಯದರ್ಶಿಗಳು ಹೇಳುತ್ತಾರೆ, ಜಿಲ್ಲಾಧಿಕಾರಿಗಳು ಹೇಳುತ್ತಾರೆ ನಮಗೆ ರಿಗ್ ಯಂತ್ರಗಳ ಸಮಸ್ಯೆ ಇಲ್ಲ. ಡಬ್ಬಲ್ ವಿಜಿನ್ನಿಯಿಂದ ಕೆಲಸ ಮಾಡುವುದಕ್ಕೆ ನಮಗೆ ಕನ್‌ಫ್ಯೂಷನ್ ಇಲ್ಲ. ಜಿಲ್ಲಾ ಪರಿಷತ್ತು ಅಧ್ಯಕ್ಷರುಗಳಿಗೆ ಮತ್ತು ಸರ್ಕಾರದ ಮಂತ್ರಿಗಳಲ್ಲಿ ಏನಾದರೂ ಭಿನ್ನಾಬಿಪ್ರಾಯ ಇರಬಹುದು. ಬರಪರಿಹಾರ ಕಾಮಗಾರಿಗಳಲ್ಲಿ ಕೆಲಸವನ್ನು ಮಾಡಲಿಕ್ಕೆ ಮುಖ್ಯ ಕಾರ್ಯದರ್ಶಿಗಳು ಮತ್ತು ಜಿಲ್ಲಾಧಿಕಾರಿಗಳು ಕೆಲಸ ಮಾಡಲಿಕ್ಕೆ ಒಟ್ಟಿಗೆ ತಯಾರಾಗಿದ್ದಾರೆ. ಅವರ ತೊಂದರೆ ಏನೂ ಇಲ್ಲ. ಒಬ್ಬರೆ ಮಾಡತಕ್ಕಂಥಾದ್ದು ಜಿಲ್ಲಾ ಪರಿಷತ್ತಿನ ಇಂಜಿನಿಯರ್ ಆದರೆ ಅವರು ಒಟ್ಟಿಗೆ ಮಾಡಲಿಕ್ಕೆ ಇರುವ ತೊಂದರೆ ಅಧಿಕಾರಿಗಳು ಹೇಳುತ್ತಾರೆ ಹಣದ ಕೊರತೆ. ಕಳೆದ ಒಂದು ವಾರದಿಂದ ಏನು ಮಾಡುತ್ತಿದ್ದಾರೆಂದರೆ ಎಲ್ಲಾ ಶಾಸಕರ